**ದಿನಾಂಕಃ 06.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎ ಪಿ ಪಿ., ರವರಿಂದಃ-

ಆ ದಿನ 1 ನೇ ಆರೋಪಿ ಕೃಷ್ಣಮೂರ್ತಿಯನ್ನು ವಿಚಾರಿಸಲಾಗಿ ಸದರಿ ಮಧ್ಯವನ್ನು ತಾಯಲೂರಿನ ರೆಡ್ಡಿ ವೈನ್ಸ್ ನಿಂದ ತಂದಿರುವುದಾಗಿ ತಿಳಿಸಿದ್ದು ಅದರಂತೆ ನನ್ನ ಮೆಮೋ ದೂರಿನಲ್ಲಿ ಸದರಿ ರೆಡ್ಡಿ ವೈನ್ಸ್ ಮಾಲೀಕನ ವಿರುದ್ಧ ಕ್ರಮ ಕೈ ಗೊಳ್ಳಬೇಕೆಂದು ಕೋರಿಕೊಂಡಿರುತ್ತೇನೆ. ಸದರಿ ಮಾಲು, ಮೇಮೋ ಹಾಗೂ ಮಹಜರನ್ನು ಚಾಸಾ-8 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲು: ಶ್ರೀ ಎನ್ ಎಸ್., 2 ನೇ ಆರೋಪಿ ಪರ ವಕೀಲರಿಂದ**

ಆ ದಿನ ವಶಪಡಿಸಿಕೊಂಡಂತಹ ಮಧ್ಯ ಮಾಲುಗಳಲ್ಲಿ ರೆಡ್ಡಿ ವೈನ್ಸ್ ಸಂಬಂದಪಟ್ಟಂತಹ ಯಾವುದೇ ಲೇಬಲ್ ಗಳು ನನಗೆ ಕಂಡು ಬಂದಿರುವುದಿಲ್ಲ. ಸಾಕ್ಷಿಯೂ ಮುಂದುವರೆದು ರೆಡ್ಡಿ ವೈನ್ಸ್ ನಿಂದ ತೆಗೆದುಕೊಂಡು ಬಂದಿರುವುದಾಗಿ 1 ನೇ ಆರೋಪಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ನಾನು ಹೇಳುವಂತೆ 1 ನೇ ಆರೋಪಿ ಕೃಷ್ಣ ಮೂರ್ತಿ ವೈನ್ಸ್ ಟೆಟ್ರಾ ಪ್ಯಾಕೆಟ್ ಗಳನ್ನು ರೆಡ್ಡಿ ವೈನ್ನಿಂದ ತಂದಿರುವುದಾಗಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಅ ದಿನ ಸ್ಥಳದಲ್ಲಿ ಯಾವುದೇ ಮಹಜರು ಜರುಗಿಸಿಲ್ಲ ಹಾಗೂ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಎಂದರೆ ಸರಿಯಲ್ಲ. ಅಪ್ಪೇನಳ್ಳಿ ಗ್ರಾಮದಿಂದ ಮುಳಬಾಗಿಲು ಗ್ರಾಮಾಂತರ ಪೋಲಿಸ್ ಠಾಣೆ 15-20 ಕಿ.ಮೀ ಅಂತರವಿರುತ್ತದೆ. ನಾನು ಮಹಜರು ಮಾಡಿರುತ್ತೇನೆಂದು ಹೇಳುವ ವೇಳೆಗೂ ಹಾಗೂ ದೂರನ್ನು ದಾಖಲಿಸಿಕೊಂಡಿರುವ ವೇಳೆಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ಆ ದಿನ 1 ನೇ ಆರೋಪಿಯೂ ನಮ್ಮನ್ನು ನೋಡಿ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದು ಹೇಳಿದ್ದು ಹಾಗಾದರೆ ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ರೆಡ್ಡಿ ವೈನ್ಸ್ ನಿಂದ ತಂದು ಮಾರಾಟ ಮಾಡುತ್ತಿದ್ದುದಾಗಿ ನನಗೆ ಯಾರು ತಿಳಿಸಿದರೂ ಎಂಬ ಪ್ರಶ್ನೆಗೆ ಸಾಕ್ಷಿಯೂ ನಮಗೆ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ಮಹಜರು ಜರುಗಿಸಲು ನಾನು ಸ್ಥಳಿಯ ಸಾಕ್ಷಿದಾರರನ್ನು ಸೇರಿಸಿಕೊಳ್ಳದೇ ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ಹೇಳುವಂತೆ ಆ ದಿನ 1 ನೇ ಆರೋಪಿ ಮನೆಯಲ್ಲಿ ಯಾವುದೇ ಮಧ್ಯಮಾಲುಗಳು

ದೊರಕಿಲ್ಲ ಎಂದರೆ ಸರಿಯಲ್ಲ. ನಾನೇ ಊಹೆ ಮಾಡಿಕೊಂಡು 2 ನೇ ಆರೋಪಿಗೆ ತೊಂದರೆ ಕೊಡಲು ರೆಡ್ಡಿ ವೈನ್ಸ್ ನಿಂದ ಮದ್ಯದ ಪ್ಯಾಕೆಟ್ ಗಳನ್ನು ತಂದು ಮಾರಾಟ ಮಾಡುತ್ತಿದ್ದುದಾಗಿ ಸೃಷ್ಟಿ ಮಾಡಿಕೊಂಡು ಅದಕ್ಕೆ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.